# ವಿವೇಕಪ್ರಭ

**ಪರಿಪೂರ್ಣ ಜೀವನದ ಪರಮಾಪ್ತ ಪತ್ರಿಕೆ**

**ಶ್ರೀರಾಮಕೃಷ್ಣ ಆಶ್ರಮ, ವಿವೇಕಪ್ರಭ ಕಾರ್ಯಾಲಯ, ಯಾದವಗಿರಿ, ಮೈಸೂರು 570 020**

## ಚಂದಾ ಅರ್ಜಿ

ಮಾನ್ಯರೇ, (ನಿಮಗೆ ಸಂಬಂಧಿಸಿದ್ದನ್ನು ✓ ಮಾಡಿ)

☐ ನನ್ನನ್ನು / ಈ ಕೆಳಕಂಡ ಹೆಸರಿನವರನ್ನು 'ವಿವೇಕಪ್ರಭ' ಪತ್ರಿಕೆಯ ಚಂದಾದಾರರನ್ನಾಗಿ/ ಪೋಷಕರನ್ನಾಗಿ ಮಾಡಬೇಕಾಗಿ ವಿನಂತಿ

☐ ನನ್ನ/ ಕೆಳಕಂಡ ಹೆಸರಿನವರ ಚಂದಾವನ್ನು ನವೀಕರಿಸಬೇಕಾಗಿ ವಿನಂತಿ. ಈಗಿನ ಚಂದಾಸಂಖ್ಯೆ.........................

**ನನ್ನ ವಿಳಾಸ**

ನನ್ನ ಹೆಸರು..........................................................................

ವಿಳಾಸ................................................................................

.........................................................................................

..................................................ಪಿನ್..........................

ಚಂದಾ ವಿವರ: (ನಿಮಗೆ ಸಂಬಂಧಿಸಿದ್ದನ್ನು ✓ ಮಾಡಿ)

| 1 ವರ್ಷದ ಚಂದಾ | 3 ವರ್ಷದ ಚಂದಾ | ಆಜೀವ ಚಂದಾ | ಪೋಷಕರ ಸಹಾಯಧನ |
|---|---|---|---|
| ₹ 140 | ₹ 375 | ₹ 3000 | ₹ 5000 |

**ಪತ್ರಿಕೆ ಪಡೆಯುವವರ ವಿಳಾಸ**

ಹೆಸರು...............................................................................

ವಿಳಾಸ...............................................................................

.........................................................................................

..................................................ಪಿನ್..........................

**ಹಣವನ್ನು ಮನಿ ಆರ್ಡರ್ / ಡ್ರಾಫ್ಟ್ (ಶ್ರೀರಾಮಕೃಷ್ಣ ಆಶ್ರಮ, ವಿವೇಕಪ್ರಭ A/c ಹೆಸರಿನಲ್ಲಿ) ಮೂಲಕ ಕಳುಹಿಸುತ್ತಿದ್ದೇನೆ.**

ವಿವರ.......................................................................

**1. ಹೊರ ಊರಿನ ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.**

**2. ವಿದೇಶಗಳಿಗೆ ಅನ್ವಯವಾಗುವ ಚಂದಾ ವಿವರಗಳಿಗೆ ಹಾಗೂ ಇತರ ವಿವರಗಳಿಗಾಗಿ ನಮಗೆ ಬರೆಯಿರಿ.**

**ಸಹಿ**

# ಓದುಗರ ವೇದಿಕೆ

ಪೂಜ್ಯರೆ,

೨೦೧೪ ಸೆಪ್ಟಂಬರ್ ತಿಂಗಳ 'ವಿವೇಕಪ್ರಭ' ಸಂಪಾದಕೀಯ ಓದಿ ಕೇವಲ ಸಂತೋಷವಲ್ಲದೆ, ಅನೇಕ ದಿನಗಳಿಂದ ಸಮಸ್ಯೆಗಳಾಗಿಯೇ ಉಳಿದಿದ್ದ ಪ್ರಶ್ನೆಗಳಿಗೆ ಉತ್ತರ ದೊರೆಯಿತು ಎಂಬ ಭಾವದಿಂದ ತುಂಬಿಕೊಂಡಿದ್ದೇನೆ. ಪರಿಪೂರ್ಣತೆಯನ್ನು ಕುರಿತು ಅನೇಕ ಆಯಾಮಗಳನ್ನು ಉಲ್ಲೇಖಿಸಿದ್ದೀರಿ, ಆ ಎಲ್ಲಾ ಆಯಾಮಗಳು, ಸಾಧಕನ ಮನಸ್ಸಿನ ತಿಳುವಳಿಕೆಗೆ ಸ್ಪಂದಿಸಿ, ದೃಢೀಕರಿಸುವಂತೆ ಇವೆ. ಶಾಂತಿ ಮಂತ್ರದಂತೆ ಪೂರ್ಣವಸ್ತುವಿನ ಒಂದು ಅಂಶವಾದ ನನಗೆ ಪೂರ್ಣತೆ ಲಭ್ಯವಾಗುವುದು ಎಂಬ ದೃಢ ವಿಶ್ವಾಸದೊಂದಿಗೆ ತ್ರಿಕಾಲ ಪ್ರಣಾಮಗಳನ್ನು ಅರ್ಪಿಸುತ್ತಿದ್ದೇನೆ.

*ಕೆ. ಕೊಟ್ರಪ್ಪ, ಮುಧೋಳ*

ಅಕ್ಟೋಬರ್ ತಿಂಗಳ 'ವಿವೇಕಪ್ರಭ' ದಲ್ಲಿ ಪ್ರಕಟವಾದ '**ಸ್ವಾಮಿ ಅಖಂಡಾನಂದ ಸ್ಮೃತಿ ಸಂಚಯ**'ದಲ್ಲಿ ಒಂದು ತಪ್ಪಾಗಿದೆ. ೧೮೬೩ ರಲ್ಲಿ ಸ್ವಾಮಿ ವಿವೇಕಾನಂದರ ಜನ್ಮತಿಥಿಯ ಮಾರನೆಯ ದಿನ ಎಂದು ಹೇಳಿದೆ. ಆಗ ಸ್ವಾಮೀಜಿ ಇನ್ನೂ ಜನಿಸಿರಲಿಲ್ಲ. ಅದು ೧೯೬೩ ಎಂದಾಗಬೇಕಿತ್ತಲ್ಲವೆ?

*ಒಬ್ಬ ಓದುಗರು, ತುಮಕೂರು(ದೂರವಾಣಿ ಮೂಲಕ)*

**(ಹೌದು, ತಪ್ಪಾಗಿದೆ. ಅದು ೧೯೬೩ ಎಂದೇ ಆಗಬೇಕು. ಪ್ರಮಾದಕ್ಕಾಗಿ ವಿಷಾದಿಸುತ್ತೇವೆ. -ಸಂ)**

ಮಾನ್ಯರೆ,

'ವಿವೇಕಪ್ರಭ' ಪತ್ರಿಕೆಯ ಬರಹಗಳು ಚೆನ್ನಾಗಿವೆ. ಆದರೆ ಭಾಷೆ ಜನಸಾಮಾನ್ಯರಿಗೆ ಅರ್ಥವಾಗುವಂತಿಲ್ಲ. ಭಾಷೆಯನ್ನು ತುಸು ಸರಳವಾಗಿಸಬಾರದೆ? ಧರ್ಮ ವಿಚಾರಗಳು ಬಹುಮಂದಿಗೆ ತಲುಪುವಂತೆ ಮಾಡಲು ಅದು ಅಗತ್ಯವಲ್ಲವೆ?

*ಸುನೀತಾ ಕೃಷ್ಣಮೂರ್ತಿ (ಇ-ಮೇಲ್ ಪತ್ರ)*

ಪ್ರಿಯ ಓದುಗರೆ,

'ವಿವೇಕಪ್ರಭ' ಪತ್ರಿಕೆಯ ಬಗೆಗೆ, ಇಲ್ಲಿರುವ ಲೇಖನಗಳು ಹಾಗೂ ಇತರ ಅಂಕಣಗಳ ಬಗೆಗೆ ನಿಮ್ಮ ಅನಿಸಿಕೆಗಳನ್ನು ನೀವು ಬರೆದು ಕಳುಹಿಸಬಹುದು. ನಿಮ್ಮ ಅಮೂಲ್ಯ ಸಲಹೆ, ಸೂಚನೆಗಳು ಪತ್ರಿಕೆಯ ಬೆಳವಣಿಗೆಗೆ ಅತ್ಯಗತ್ಯ. ಆಯ್ದ ಪತ್ರಗಳನ್ನು ಸ್ಥಳಾವಕಾಶಕ್ಕೆ ಅನುಗಣವಾಗಿ ಪ್ರಕಟಿಸುತ್ತೇವೆ.

*-ಸಂ*

ಸಂಪಾದಕೀಯ



# ಅರಿವು ನೀಡುವ ತಾಯಿ

## ೧. ಒಂದು ಅನುಭವ

ಶ್ರೀಮಾತೆಯವರೊಂದಿಗೆ ಒಬ್ಬ ಹುಡುಗ ಬಾಂಕುರ ಆಶ್ರಮಕ್ಕೆ ಬಂದ. ಶ್ರೀಮಾತೆಯವರ ಸೊಸೆ ರಾಧುವಿಗೆ ಕಾಯಿಲೆ; ಚಿಕಿತ್ಸೆಗಾಗಿ ಅವಳನ್ನೂ ಅಲ್ಲಿಗೆ ಕರೆತಂದಿದ್ದರು. ಆಶ್ರಮದ ಒಂದು ಕೋಣೆಯಲ್ಲಿ ರೋಗಿ, ಇನ್ನೊಂದು ಕೋಣೆಯಲ್ಲಿ ಶ್ರೀಮಾತೆ ಮತ್ತು ಈ ಹುಡುಗ. ಶ್ರೀಮಾತೆಯವರ ಸುಕ್ಕುಗಟ್ಟಿದ, ಗುಳಿಬಿದ್ದ ಪಾದಗಳ ಮೇಲೆ ಹುಡುಗ ಕೈಯಾಡಿಸತೊಡಗಿದ. ಇದ್ದಕ್ಕಿದ್ದಂತೆ ಅವನಿಗೊಂದು ಆಲೋಚನೆ ಬಂತು – ಶ್ರೀಮಾತೆ ನಿಜವಾಗಿಯೂ ಜಗನ್ಮಾತೆಯೆ? ಜಗನ್ಮಾತೆಯದು ಇಂಥ ಜೋತುಬಿದ್ದ ಚರ್ಮದ ಕಾಲುಗಳೆ? ಹಾಗೇ ಕೈಯಾಡಿಸುತ್ತಿದ್ದ ಆತನಿಗೆ ಕ್ರಮೇಣ ಅನುಭವಕ್ಕೆ ಬಂತು, ಅದು ವೃದ್ಧೆಯ ಸುಕ್ಕುಗಟ್ಟಿದ ಪಾದಗಳಲ್ಲ, ತರುಣಿಯ ಸುಪುಷ್ಟವಾದ ಪಾದಗಳು! ಲಾಟೀನಿನ ಬೆಳಕಿನಲ್ಲಿ ನೋಡಿದ– ಅಲಂಕಾರದಿಂದ ಕೂಡಿದ ಪಾದ, ಕಾಂತಿ ಸೂಸುತ್ತಿರುವ ಉಗುರುಗಳು, ಎರಡೂ ಪಾದಗಳಲ್ಲಿ ಬಂಗಾರದ ಗೆಜ್ಜೆಗಳು, ಮುತ್ತುಮಾಣಿಕ್ಯಗಳಿಂದ ಕೂಡಿದ ಗೆಜ್ಜೆಗಳು! 'ನಾನು ಯಾರ ಸೇವೆ ಮಾಡುತ್ತಿದ್ದೇನೆ!' ಎಂದವನು ಮೂಕವಿಸ್ಮಿತನಾಗಿ ಶ್ರೀಮಾತೆಯವರ ಚರಣಗಳಿಂದ ದೃಷ್ಟಿಯನ್ನು ಅವರ ಮುಖದ ಕಡೆಗೆ ಹರಿಸಿದ. ಅಲ್ಲಿ ನೋಡಿದ – ಬಂಗಾರದ ಕಾಂತಿ, ತ್ರಿನಯನೆ, ಚತುರ್ಭುಜೆ, ನಾನಾಲಂಕಾರ ಭೂಷಿತೆಯಾದ ಜಗದ್ಧಾತ್ರೀ ಮೂರ್ತಿ ಅವಳು! ತಲೆಯಲ್ಲಿ ಕಿರೀಟ, ಕೈಗಳಲ್ಲಿ ಅಸ್ತ್ರಗಳು; ಸರ್ವಾಂಗಗಳಿಂದಲೂ ಜ್ಯೋತಿ ಹೊರಹೊಮ್ಮುತ್ತಿದೆ! ಚೆನ್ನಾಗಿ ಆಕೆಯನ್ನು ನೋಡುವ ಮೊದಲೇ 'ಅಮ್ಮಾ, ಅಮ್ಮಾ' ಎನ್ನುತ್ತ ಪ್ರಜ್ಞೆತಪ್ಪಿ ಬಿದ್ದುಬಿಟ್ಟ ಈ ಹುಡುಗ. ಪ್ರಜ್ಞೆ ಬಂದಾಗ ಶ್ರೀಮಾತೆ ಅವನ ಬೆನ್ನಮೇಲೆ ಕೈಯಾಡಿಸುತ್ತ, 'ನಿನಗೇನಾಯಿತು? ಎದ್ದೇಳು' ಎನ್ನುತ್ತಿದ್ದರು. ಹುಡುಗ ಮತ್ತೆ ನೋಡಿದ – ಅದೇ ಕೃಶವಾದ ಶರೀರ, ಸುಕ್ಕುಗಟ್ಟಿದ ಚರ್ಮದಿಂದ ಕೂಡಿದ ವೃದ್ಧೆ ಶ್ರೀಮಾತೆ! ಕಾಯಿಲೆಯಿಂದ ನರಳುತ್ತಿದ್ದ ತಮ್ಮ ಸೊಸೆಯತ್ತ ಅವರು ನೋಡುತ್ತಿದ್ದರು.

ಇದು ಸ್ವಾಮಿ ಹರಿಪ್ರೇಮಾನಂದರ ಆತ್ಮಕಥನ. ಶ್ರೀಮಾತೆಯವರನ್ನು ಕುರಿತು ಅವರು ಬರೆದ ಸ್ಮೃತಿಲೇಖನದಲ್ಲಿ ಶ್ರೀಮಾತೆಯವರ ಸಾನ್ನಿಧ್ಯದಲ್ಲಿ ಅವರಿಗಾದ ಅನುಭವವನ್ನು ಹೀಗೆ ವರ್ಣಿಸಿದ್ದಾರೆ. ಒಂದರ್ಥದಲ್ಲಿ ಈ ಘಟನೆ ಮಾನವನ ಗ್ರಹಿಕೆಯ ಮಿತಿಯನ್ನು ಚಿತ್ರಿಸುತ್ತದೆ. ಅಸಾಧಾರಣ ಬದುಕನ್ನು ನಡೆಸಿದ ಶ್ರೀಮಾತೆ ಶಾರದಾದೇವಿಯವರ ದೈನಂದಿನ ಬದುಕನ್ನು ಕಂಡಾಗ ಅನೇಕರಿಗೆ, 'ಇವರು ಹಳ್ಳಿಯ ಸಾಮಾನ್ಯ ಹೆಂಗಸಿನಂತೆ ನಾನಾ ಕೆಲಸಗಳಲ್ಲಿ ಮುಳುಗಿರುತ್ತಾರಲ್ಲ! ಇವರಲ್ಲಿ ವಿಶೇಷತೆಯೇನಿದೆ?' ಎಂದು ಅನ್ನಿಸಿದ್ದಿದೆ. ಆದರೆ ಅವರ ಅಲೌಕಿಕ ಜೀವನದ, ಅಸೀಮ ದಿವ್ಯಪ್ರೀತಿಯ ಪರಿಚಯ ಅವರಿಗಾಗುತ್ತಿದ್ದುದು ಅವರೊಂದಿಗೆ ಒಡನಾಡಿದಾಗಲೇ. ಶ್ರೀಮಾತೆಯವರು ತಮ್ಮ ನಿಷ್ಕಪಟ ನಡೆ–ನುಡಿಗಳಿಂದ, ಸರಳವಾದ ಜೀವನಕ್ರಮದಿಂದ ನಮಗೆ ಆಪ್ತರಾಗುತ್ತಾರೆ; ಎಲ್ಲರನ್ನೂ ತಮ್ಮವರನ್ನಾಗಿ ಮಾಡಿಕೊಳ್ಳುವ ವಿಶ್ವವಿಶಾಲ ಹೃದಯದಿಂದ ಅತಿ ಎತ್ತರದವರಾಗುತ್ತಾರೆ. ಆದರೆ ಇದರ ಹಿಂದಿರುವ ಅವರ ಆಧ್ಯಾತ್ಮಿಕ ಔನ್ನತ್ಯ ನಮ್ಮ ಗ್ರಹಿಕೆಯನ್ನೆಲ್ಲ ಮೀರಿ ನಿಂತಿದೆ. ಅದರ ಅಲ್ಪ ಪರಿಚಯವಾದರೂ ನಾವು ವಿಸ್ಮಯಭರಿತರಾಗಿ ಅವರ ಮುಂದೆ ಶಿಶುವಾಗಿಬಿಡುತ್ತೇವೆ.

## ೨. ಶಾರದೆ ಜ್ಞಾನದಾಯಿಕೆ

ಶ್ರೀರಾಮಕೃಷ್ಣರ ದಿವ್ಯಾದ್ಭುತ ಲೀಲೆಯನ್ನು ಪ್ರತ್ಯಕ್ಷ ಕಂಡು, ಅವರ ಧ್ಯಾನ, ಸಮಾಧಿ, ಭಾವವಿಲಾಸಗಳನ್ನು ಅರಿತುಕೊಂಡಿದ್ದ ಶ್ರೀಮಾತೆಯವರು ತಮ್ಮ ಜೀವನದುದ್ದಕ್ಕೂ ಅಂಥ ಆಧ್ಯಾತ್ಮಿಕತೆ ಬಾಹ್ಯದಲ್ಲಿ ವ್ಯಕ್ತವಾಗದಂತೆ ಮರೆಮಾಚಿದರು. ನಾನಾ ಬಗೆಯ ಸಾಮಾಜಿಕ ಸನ್ನಿವೇಶಗಳಲ್ಲಿ, ಹಲವು ಬಗೆಯ ವ್ಯಕ್ತಿಗಳ ನಡುವೆ ಜೀವಿಸಬೇಕಾಗಿ ಬಂದಾಗ ಅವರಿಗೆ ಅದು ಅನಿವಾರ್ಯವಾಗಿತ್ತು. ಆದರೆ ಕೆಲವೇ ಮಂದಿ ಭಾಗ್ಯಶಾಲಿಗಳಿಗೆ ಶ್ರೀಮಾತೆಯವರ ದಿವ್ಯ ವ್ಯಕ್ತಿತ್ವದ ಪರಿಚಯವುಂಟಾಗಿ, ಅವರು ಅಂತಿಂತಹ ವ್ಯಕ್ತಿಯಲ್ಲ; ಸಾಕ್ಷಾತ್ ಜಗನ್ಮಾತೆಯೇ ಧರೆಗಿಳಿದು ಬಂದಿದ್ದಾರೆ ಎಂಬುದನ್ನು ಅರಿತುಕೊಂಡರು. ಮನುಷ್ಯನ ಉತ್ತಮ ಗುಣಗಳಾದ ಪ್ರೀತಿ, ವಾತ್ಸಲ್ಯ, ಕರುಣೆ, ಸರಳತೆ, ಸೇವಾಮನೋಭಾವ, ಕಾರ್ಯದಕ್ಷತೆ, ಸೂಕ್ಷ್ಮಸಂವೇದನೆ, ಚುರುಕಾದ ಬುದ್ಧಿ, ಸಾಮಾನ್ಯ ಜ್ಞಾನ, ವ್ಯಾವಹಾರಿಕತೆ, ನಯನಾಜೂಕು, ಸುಸಂಸ್ಕೃತ ಹಾಗೂ ಗಂಭೀರ ನಡೆನುಡಿ ಇವೆಲ್ಲದರಲ್ಲೂ ಶ್ರೀಮಾತೆ ಅತ್ಯುತ್ತಮರಾಗಿದ್ದಾರೆ. ಈ ಎಲ್ಲ ಗುಣಗಳ ಹಿಂದೆ ಪ್ರಜ್ವಲಿಸುತ್ತಿದ್ದ ಅವರ ಆಧ್ಯಾತ್ಮಿಕ ಅನುಭವಗಳು ಅನೇಕರಿಗೆ ಅಗೋಚರವಾಗಿ ಹೋಯಿತು. ಯಾರು ಸಿದ್ಧರಾಗಿದ್ದರೋ ಅವರಿಗಷ್ಟೇ ಶ್ರೀಮಾತೆ ತಮ್ಮ ನಿಜವಾದ ಸ್ವರೂಪವನ್ನು ತೋರಿಸಿದ್ದಿರಬೇಕು. ಹಲವು ಮಂದಿ ಭಕ್ತರ ಹಾಗೂ ಸಂನ್ಯಾಸಿಗಳ ಜೀವನದಲ್ಲಿ ಶ್ರೀಮಾತೆಯವರ ಅಪೂರ್ವ ವ್ಯಕ್ತಿತ್ವದ ದರ್ಶನವಾದ ವಿವರಗಳು ಬರುತ್ತವೆ. ಅವರು ದಾಖಲಿಸಿದ ಲೇಖನಗಳನ್ನು ಓದುವಾಗ ನಾವೂ ಒಂದುಕ್ಷಣ ಬೆಚ್ಚಿ ಬೀಳುತ್ತೇವೆ, 'ಶ್ರೀಮಾತೆ ಇಂಥವರೆ! ಏನು ಅದ್ಭುತ ಅವರ ನಿಜವಾದ ವ್ಯಕ್ತಿತ್ವ!' ಎಂದು ಉದ್ಗರಿಸುತ್ತೇವೆ.

ಶ್ರೀಮಾತೆಯವರ ಜೀವನದ ವಿವಿಧ ಘಟನೆಗಳನ್ನು ಅವಲೋಕಿಸುತ್ತ, ಅವರಾಡಿದ ಮಾತುಗಳನ್ನೇ ಧ್ಯಾನಿಸುತ್ತ ಹೋದಂತೆ ನಮ್ಮ ಗ್ರಹಣಶಕ್ತಿ, ನಮ್ಮ ತಿಳುವಳಿಕೆ ಎಷ್ಟು ಅಲ್ಪವಾದದ್ದು ಅನ್ನಿಸುತ್ತದೆ. 'ನನಗೆಲ್ಲವೂ ಅರ್ಥವಾಗುತ್ತದೆ' ಎಂಬ ಭಾವನೆಯಿಂದ ನಾವು ಎಲ್ಲವನ್ನೂ ಅರಿಯತೊಡಗುತ್ತೇವೆ, ಅರ್ಥವಾಗದಾದಾಗ ತಡಕಾಡುತ್ತೇವೆ. ಕೊನೆಗೆ ಎಷ್ಟು ಅರ್ಥವಾಯಿತು ಅಷ್ಟಕ್ಕೇ, 'ಎಲ್ಲವೂ ತಿಳಿಯಿತು' ಎಂದುಕೊಳ್ಳುತ್ತೇವೆ. ಇದು ನಮ್ಮ ಮಿತಿಯೂ ಹೌದು, ಅರಿವಿನ ನಿರಂತರ ವಿಕಾಸಕ್ಕೆ ಅಡ್ಡಿಯೂ ಹೌದು. ಶ್ರೀಮಾತೆಯವರ ವ್ಯಕ್ತಿತ್ವದ ಆಳದಲ್ಲಿ ಅಡಗಿರುವ ಅವ್ಯಕ್ತ ದೈವೀ ವ್ಯಕ್ತಿತ್ವ ನಮ್ಮ ಅರಿವನ್ನೆಲ್ಲ ಆವರಿಸಿಬಿಡುತ್ತದೆ; ನಮ್ಮ ಅಜ್ಞಾನದ ಅರಿವನ್ನು ನಮಗೆ ಮಾಡಿಕೊಡುತ್ತದೆ. ಈ ಅರ್ಥದಲ್ಲಿ ಶ್ರೀಮಾತೆಯವರು ನಿಜವಾದ ಜ್ಞಾನದಾತೆ, ನಮ್ಮ ಅಂಧಕಾರಗಳನ್ನು ನೀಗುವ ಸರಸ್ವತಿ. 'ಅವಳ ಹೆಸರು ಶಾರದೆ; ಅವಳು ಜ್ಞಾನವನ್ನು ನೀಡಲು ಬಂದಿರುವವಳು' ಎಂದು ಶ್ರೀರಾಮಕೃಷ್ಣರೇ ಒಂದೆಡೆ ಹೇಳಿದ್ದಾರೆ. ಜೀವಿಗಳ ಮಾನಸಿಕ, ಬೌದ್ಧಿಕ ಮಿತಿಯನ್ನೇ ವಿಸ್ತರಿಸಿ, ಅಗಾಧ ಸತ್ಯದ ದೈವೀಪ್ರಪಂಚದಲ್ಲಿ ಅವು ಈಜಾಡುವಂತೆ, ಉನ್ನತ ನೆಲೆಗೆ ಹಾರಾಡುವಂತೆ ಮಾಡುವ ಉದ್ಧಾರಕ ಶಕ್ತಿ ಅವರದು.

### ೩. ಚರಿತ್ರೆಯ ಮರುವ್ಯಾಖ್ಯಾನ

ಶ್ರೀಮಾತೆ ರಾಮೇಶ್ವರ ಯಾತ್ರೆ ಪೂರೈಸಿ ಕಲ್ಕತ್ತೆಗೆ ಮರಳಿ ಬಂದಿದ್ದರು. ಕೋಯಲ್‌ಪರಾ ಆಶ್ರಮದ ಸ್ವಾಮಿ ಕೇಶವಾನಂದರು ಶ್ರೀಮಾತೆಯವರನ್ನು ಕೇಳಿದರು, ''ರಾಮೇಶ್ವರ ಮೊದಲಾದ ಕಡೆ ಯಾತ್ರೆ ಹೇಗಾಯಿತು?'' ಅದಕ್ಕೆ ಶ್ರೀಮಾತೆ, ''ಮಗೂ, ಹೇಗೆ ಇರಿಸಿದ್ದೆನೋ ಹಾಗೇ ಎಲ್ಲವೂ ಇತ್ತು'' ಎಂದರು. ಆ ದಾರಿಯಾಗಿ ಹೋಗುತ್ತಿದ್ದ ಗೋಲಾಪ್ ಮಾ ಅದನ್ನು ಕೇಳಿಸಿಕೊಂಡು, ''ಏನೆಂದಿರಿ, ಅಮ್ಮಾ?'' ಎಂದು ಕೇಳಿದರು. ಅದಕ್ಕೆ ಶ್ರೀಮಾತೆ ತುಸು ಅವಾಕ್ಕಾಗಿ, ''ಏಕೆ, ಏನು ಹೇಳಲಿ? ನಾನೆಂದೆ, ನಾನು ನಿಮ್ಮಿಂದ ಏನೇನು ಕೇಳಿದ್ದೆನೋ ಎಲ್ಲವೂ ಹಾಗೇ ಇದ್ದದ್ದನ್ನು ನೋಡಿ ತುಂಬಾ ಆನಂದವಾಯಿತು ಅಂತ'' ಎಂದರು. ಆಗ ಗೋಲಾಪ್ ಮಾ, ''ಬೇಡಮ್ಮಾ; ನಾನು ಎಲ್ಲವನ್ನೂ ಕೇಳಿಸಿಕೊಂಡೆ. ಈಗ ಮಾತು ಬದಲಾಯಿಸಿದರೆ ಏನೂ ನಡೆಯದು'' ಎಂದರು. ಶ್ರೀಮಾತೆಯವರ ಸಂಗಾತಿಯಾಗಿದ್ದ ಗೋಲಾಪ್‌ಮಾ ಶ್ರೀಮಾತೆಯವರ ಬಾಯಿಯಿಂದ ಅವರ ಅರಿವಿಲ್ಲದೆ ಹೊರಬಿದ್ದ ಮಾತನ್ನು ಸರಿಯಾಗಿ ಅರ್ಥೈಸಿಕೊಂಡಿದ್ದರು. – ಹಿಂದೆ ಶ್ರೀರಾಮಚಂದ್ರನ ಕಾಲದಲ್ಲಿ ಸೀತೆಯೇ ಪ್ರತಿಷ್ಠಾಪಿಸಿದ ಶಿವನ ವಿಗ್ರಹವನ್ನು ಕುರಿತು ಹೇಳಿದ್ದರು; ತಾನು ಸೀತೆಯಾಗಿದ್ದಾಗ ಇರಿಸಿದ ಆ ಮೂರ್ತಿ ಈಗಲೂ ಹಾಗೆ ಇದ್ದದ್ದನ್ನು ಅವರು ಕಂಡಿದ್ದರು.

ರಾಮಾಯಣವೇ ಮೊದಲಾದ ಪುರಾತನ ಕೃತಿಗಳಲ್ಲಿ ಉಲ್ಲೇಖಿಸಲ್ಪಟ್ಟ ಸಂಗತಿಗಳು ಕಟ್ಟುಕಥೆ ಎಂದು ನಾವು ತಳ್ಳಿಹಾಕುತ್ತೇವೆ. ರಾಮಾಯಣ, ಮಹಾಭಾರತಗಳನ್ನು ಇತಿಹಾಸವೆಂದು ಕರೆಯುವುದಿದ್ದರೂ, ಅದು ಹೆಸರಿಗೆ ಮಾತ್ರ. ಐತಿಹಾಸಿಕವಾಗಿ, ವೈಜ್ಞಾನಿಕವಾಗಿ ಮಾತನಾಡುವಾಗ ನಾವು ಈ ಕೃತಿಗಳಲ್ಲಿ ಹೇಳಿದ್ದೆಲ್ಲ ನಿಜವೆಂದು ನಂಬುವುದಿಲ್ಲ. ಆದರೆ ಶ್ರೀಮಾತೆಯವರ ಮಾತಿನ ಬೆಳಕಿನಲ್ಲಿ ನೋಡುವಾಗ, ರಾಮಾಯಣ ಕಾಲದ ಆ ಘಟನೆ ನಿಜವಾಗಿರಬೇಕಲ್ಲವೆ? ಶ್ರೀರಾಮಕೃಷ್ಣರು ತಮ್ಮ ಬಗ್ಗೆ ಹೇಳಿಕೊಳ್ಳುತ್ತ, 'ಹಿಂದೆ ತ್ರೇತಾಯುಗದಲ್ಲಿ ಯಾರು ರಾಮನಾಗಿದ್ದನೋ, ದ್ವಾಪರಯುಗದಲ್ಲಿ ಕೃಷ್ಣನಾಗಿದ್ದನೋ, ಅವನೇ ಈಗ ರಾಮಕೃಷ್ಣನಾಗಿ ಬಂದಿದ್ದಾನೆ' ಎಂದಿದ್ದರು. ಅವರು ಅವತಾರವೆಂಬುದನ್ನು ದೃಢೀಕರಿಸುವ ಮಾತು ಅದು. ಕೇವಲ ಉತ್ಪ್ರೇಕ್ಷೆಯ, ಭಾವನೆಯ ಮಾತಲ್ಲ ಅದು; ಐತಿಹಾಸಿಕ ಪರಿಕಲ್ಪನೆಯ ಆಧುನಿಕ ಮಿತಿಯನ್ನು ಮೀರಿ ನಿಂತು, ಆಧ್ಯಾತ್ಮಿಕ ನೆಲೆಯಲ್ಲಿ ಅವತಾರ ತತ್ತ್ವದ ಸತ್ಯವನ್ನು ಮನಗಂಡಾಗ ಮೂಡಿಬರುವ ಶ್ರದ್ಧೆ ಅದು. ಶ್ರೀರಾಮಕೃಷ್ಣರು ರಾಮನಾಗಿ ಬಂದಿದ್ದಾಗ ಶ್ರೀಮಾತೆ ಸೀತೆಯಾಗಿರಬೇಕಲ್ಲವೆ? ಅದನ್ನು ಪುಷ್ಟೀಕರಿಸುವಂತೆ ಬಂದಿತ್ತು ಶ್ರೀಮಾತೆಯವರ ಮೈಮರೆತ ಮಾತು. ಶ್ರೀಮಾತೆಯವರ ದಿವ್ಯ ವ್ಯಕ್ತಿತ್ವವನ್ನು ಅದು ಸೂಚಿಸುವಂತೆಯೇ, ಅವತಾರ ಪುರುಷನ ಲೀಲಾಸಹಚರಿಯಾಗಿ, ಶಕ್ತಿಯಾಗಿ ಜಗನ್ಮಾತೆಯೇ ಧರೆಗಿಳಿದು ಬಂದ ಸಂಗತಿಯನ್ನೂ ಸೂಚಿಸುತ್ತದೆ. ಸತ್ಯ, ಪ್ರಾಮಾಣಿಕತೆಗಳ ಸಾಕಾರಮೂರ್ತಿಯೆನಿಸಿಕೊಂಡ ಶ್ರೀಮಾತೆ ಶಾರದಾದೇವಿಯವರು ಆಡಿದ ಮಾತುಗಳನ್ನು ತೀರ ಸಾಮಾನ್ಯ ಮಾತುಗಳೆಂದು ಪರಿಗಣಿಸಬಾರದು, ಅಷ್ಟೆ. ಈ ಹಿನ್ನೆಲೆಯಲ್ಲಿ ಚರಿತ್ರೆಯ ಹೊಸ ವ್ಯಾಖ್ಯಾನ, ಹೊಸ ಸಾಧ್ಯತೆ ಆವಶ್ಯಕವೆನಿಸುತ್ತದೆ.

### ೪. ಸೃಷ್ಟಿ ನಿಯಮಗಳಾಚೆ

ಒಂದು ಸಣ್ಣ ಮಾತುಕತೆ. ಸ್ವಾಮಿ ಅರೂಪಾನಂದರು (ಆಗ ಬ್ರಹ್ಮಚಾರಿ ರಾಸಬಿಹಾರಿ) ಶ್ರೀಮಾತೆಯವರನ್ನು ಕೇಳುತ್ತಾರೆ: ''ಅಮ್ಮಾ, ಈ ಅನಂತ ಸೃಷ್ಟಿಯಲ್ಲಿ ಎಲ್ಲಿ ಏನಾಗುತ್ತದೆ – ಯಾರಿಗೆ ಗೊತ್ತು? ಈ ಅಸಂಖ್ಯಾತ ಗ್ರಹನಕ್ಷತ್ರ ಇವುಗಳಲ್ಲಿ ಯಾವುದಾದರೂ ಜೀವಿಗಳು ಇರುವವೋ ಇಲ್ಲವೋ ಯಾರು ಹೇಳಬಲ್ಲರು?''

ಅದಕ್ಕೆ ಶ್ರೀಮಾತೆಯವರು: ''ಮಾಯೆಯ ಸಾಮ್ರಾಜ್ಯದಲ್ಲಿ ಸರ್ವಜ್ಞನಾಗಿರುವುದು ಕೇವಲ ಈಶ್ವರನಿಗೊಬ್ಬನಿಗೆ ಮಾತ್ರ ಸಾಧ್ಯ. ಆ ಗ್ರಹ-ನಕ್ಷತ್ರಗಳಲ್ಲೆಲ್ಲ ಯಾವ ಜೀವಿಗಳೂ ವಾಸವಾಗಿಲ್ಲ.'' ಎಂದರು.

ಸಾಧಾರಣವೆಂಬಂತೆ ನಡೆದ ಈ ಸಂಭಾಷಣೆಯ ನಡುವೆ ಅದೆಷ್ಟು ಗಹನವಾದ ಅರ್ಥ ಅಡಗಿದೆಯೋ! ಈ ಆಧುನಿಕ ಯುಗದಲ್ಲಿ ಗ್ರಹಗಳಾಚೆ, ದೂರದ ನಕ್ಷತ್ರದಲ್ಲೋ ಎಲ್ಲೋ ಜೀವಿಗಳಿರಬಹುದೇನೋ ಎಂಬ ಊಹಾಪೋಹಗಳಿಗೆ ಕೊನೆಯೇ ಇಲ್ಲ. ಸೌರವ್ಯೂಹ, ಬ್ರಹ್ಮಾಂಡ (galaxy) ಗಳಾಚೆ ಎಲ್ಲೋ ಭೂಮಿಯಂಥದೇ ಗ್ರಹಗಳಿರಬಹುದು; ಅಲ್ಲಿಂದ ಬಾಹ್ಯಾಕಾಶ ಯಾತ್ರೆ ಮಾಡಿಬಂದ ಜೀವಿಗಳು ಭೂಮಿಗೆ ಮುಖಾಮುಖಿಯಾಗುವವು; ಮಾನವರಿಗೂ ಆ ಜೀವಿಗಳಿಗೂ ಯುದ್ಧ ನಡೆಯುವುದು - ಹೀಗೆ ಕಾಲ್ಪನಿಕ ಸಾಹಿತ್ಯ ಸೃಷ್ಟಿಯಾಗುತ್ತಲೇ ಇದೆ. ಹಾರುವ ತಟ್ಟೆ , ಅನ್ಯಗ್ರಹ ಜೀವಿಗಳ ಅಸ್ತಿತ್ವ ಮುಂತಾದ ವಿಷಯಗಳ ಬಗ್ಗೆ ಕೂಡ ಹಲವು ವೈಜ್ಞಾನಿಕ ಅನ್ವೇಷಕರೇ ಸತ್ಯವೆಂಬಂತೆ ಬರೆದಿದ್ದಾರೆ. ಆದರೆ ಇಲ್ಲಿಯವರೆಗೆ ಅದಾವುದೂ ದೃಢಪಟ್ಟಿಲ್ಲ. ಇಂಥ ಒಂದು ಪ್ರಶ್ನೆ ಅರೂಪಾನಂದರಿಗೆ ಹೇಗೆ ಉದ್ಭವಿಸಿತೊ! (ಸ್ವಾಮಿ ಅರೂಪಾನಂದರೇ ಇನ್ನೊಂದೆಡೆ ಹೇಳಿರುವಂತೆ, ಶ್ರೀಮಾತೆ ತಾವಾಗಿಯೇ ಪ್ರಶ್ನೆ ಕೇಳುವಂತೆ ಪ್ರಚೋದನೆ ನೀಡಿದರು, ಕೊನೆಗೆ ಅವರೇ ಅದಕ್ಕೆ ಉತ್ತರ ನೀಡಿದರು ಎಂದು ಬೇಕಾದರೂ ಅನ್ನಬಹುದು.) ಆದರೆ ಶ್ರೀಮಾತೆ ನೀಡುವ ಉತ್ತರ ತುಂಬ ರೋಚಕವಾಗಿದೆ. ಅಸಂಖ್ಯಾತ ಗ್ರಹ ನಕ್ಷತ್ರ ತಾರಾವಳಿ ಇವನ್ನೆಲ್ಲ ಒಟ್ಟಾಗಿ ಸೇರಿಸಿ 'ಮಾಯಾಪ್ರಪಂಚ' ಎನ್ನುತ್ತಲೇ ಅವರು ಅದಕ್ಕೊಂದು ಆಧ್ಯಾತ್ಮಿಕ ಆಯಾಮವನ್ನು ಕೊಡುತ್ತಾರೆ. ನಿಜ, ವ್ಯಕ್ತ ಪ್ರಪಂಚವೆಲ್ಲವೂ ಪಂಚಭೂತಾತ್ಮಕವಾದ ಘನ ವಸ್ತುಗಳ ಸಂಯೋಜನೆ ಹಾಗೂ ವಿಶ್ವನಿಯಮಗಳ ಒಂದು ಸರಣಿ ತಾನೆ! ಅದೆಲ್ಲವೂ ಮಾಯಾಪ್ರಪಂಚದ ಅಂಗವಷ್ಟೇ ಆಗಿದೆ. ಅದರಲ್ಲಿ ಪ್ರತಿಯೊಂದು ಸಂಗತಿಯನ್ನೂ ತಿಳಿಯುವುದು, ಅನಾದಿ-ಅನಂತವಾದ ಸೃಷ್ಟಿಯ ವಿವರಗಳನ್ನು ಅರ್ಥಮಾಡಿಕೊಳ್ಳುವುದು ಮಾನವಮಾತ್ರರಿಗೆ ಅಸಾಧ್ಯವಾದ ವಿಚಾರ. (ಅದೆಷ್ಟೇ ವೈಜ್ಞಾನಿಕ ಅನ್ವೇಷಣೆಗಳು ನಡೆಯಲಿ, ಯಂತ್ರಜಗತ್ತಿನ ಮಾಧ್ಯಮಗಳು ಸೃಷ್ಟಿಯಾಗಲಿ - ಅವೆಲ್ಲ ನಗಣ್ಯ) ಅದನ್ನೆಲ್ಲ ಅರಿಯುವ ಸಾಮರ್ಥ್ಯ ಮಾಯಾ ಪ್ರಪಂಚದ ನಿರ್ಮಾತೃವಾದ ಈಶ್ವರನಿಗಷ್ಟೇ ಇದೆ ಎನ್ನುತ್ತಾರೆ ಶ್ರೀಮಾತೆ. ಸರ್ವಜ್ಞತ್ವ ಎಂಬುದು ಈಶ್ವರನ ಒಂದು ವಿಶೇಷ ಗುಣವೆಂದು ಹೇಳುವ ಸಾಂಖ್ಯ ಹಾಗೂ ವೇದಾಂತ ತತ್ತ್ವಗಳಿಗೆ ಅನುಗುಣವಾಗಿಯೇ ಇದೆ, ಅವರ ಮಾತು. ಆದರೆ ಶ್ರೀಮಾತೆ ಅಷ್ಟಕ್ಕೇ ನಿಲ್ಲಿಸದೆ, ''ಆ ಗ್ರಹ-ನಕ್ಷತ್ರಗಳಲ್ಲೆಲ್ಲ ಯಾವ ಜೀವಿಗಳೂ ವಾಸವಾಗಿಲ್ಲ'' ಎನ್ನುತ್ತಾರೆ. ಯಾವ ಸಂದೇಹಕ್ಕೂ ಆಸ್ಪದವಿಲ್ಲದಂತೆ, ಈ ರೀತಿ ನಿಶ್ಚಯವಾಗಿ ಶ್ರೀಮಾತೆ ಹೇಳಿರುವುದರ ಇಂಗಿತಾರ್ಥವೇನು? ತಾವೇ ಸಕಲ ಜಗತ್ತನ್ನು ಸೃಷ್ಟಿಸಿರುವ ಈಶ್ವರನೆಂದು ತಾನೆ? ಹಲವು ವರ್ಷಗಳ ನಂತರ ಈ ಸಂದೇಹವನ್ನು ಒಬ್ಬರು ಭಕ್ತರು ಸ್ವಾಮಿ ಅರೂಪಾನಂದರ ಮುಂದಿಟ್ಟಾಗ ಅವರು ಅದನ್ನು ಸಮರ್ಥಿಸಿದರು. ಪ್ರಪಂಚದ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣಳಾದ, ಸಮಸ್ತ ಜೀವಿಗಳ ಕರ್ಮಗತಿಯನ್ನೂ, ಬಂಧನ-ಮೋಕ್ಷಗಳನ್ನೂ ನಿಯಂತ್ರಿಸುವ ಆದಿಶಕ್ತಿ, ಜಗನ್ಮಾತೆ ಈಗ ಶ್ರೀಮಾತೆ ಶಾರದಾದೇವಿಯ ರೂಪದಲ್ಲಿ ಪ್ರಕಟಗೊಂಡಿದ್ದಾರೆ ಎಂಬ ಅರಿವು ಮೂಡುವ ವ್ಯಕ್ತಿಯೇ ಧನ್ಯನು. ಸಾಮಾನ್ಯ ಮಹಿಳೆಯ ಹಿಂದೆ ಅಡಗಿರುವ ಈ ದೈವೀ ಶಕ್ತಿಯ ಅರಿವು ನಮ್ಮಲ್ಲಿ ಉದಿಸುವುದಕ್ಕೆ ಶ್ರೀಮಾತೆಯವರ ಕೆಲವು ಅರ್ಥಗರ್ಭಿತವಾದ ಮಾತುಗಳನ್ನು, ವಿಶಿಷ್ಟವಾದ ಅವರ ಜೀವನದ ಘಟನೆಗಳನ್ನು ಅವಲೋಕಿಸಬೇಕು.

### ೫. ಜಡ-ಚೈತನ್ಯಗಳ ಮೂಲ

ಸ್ವಾಮಿ ಶಾಂತಾನಂದರು ಶ್ರೀಮಾತೆಯವರನ್ನು ಕುರಿತ ತಮ್ಮ ಸ್ಮೃತಿಚಿತ್ರದಲ್ಲಿ ಬರೆಯುತ್ತಾರೆ: ಒಂದು ದಿನ ಮಾತಿನ ಮಧ್ಯೆ ಶ್ರೀಮಾತೆ ಹೇಳಿದ್ದರು, ''ಶ್ರೀರಾಮಕೃಷ್ಣರ ಕೂದಲು ಕ್ಷುಲ್ಲಕ ವಸ್ತುವೆ? ಅವರ ದೇಹತ್ಯಾಗವಾದ ನಂತರ ನಾನು ಪ್ರಯಾಗಕ್ಕೆ ಹೋದಾಗ ಅವರ ಕೂದಲನ್ನು ಕೈಯಲ್ಲಿ ಹಿಡಿದು 'ಈಗ ನೀರಿನಲ್ಲಿ ಅರ್ಪಿಸುತ್ತೇನೆ' ಎಂದು ಭಾವಿಸುತ್ತಿದ್ದೆ. ಅಷ್ಟರಲ್ಲಿ ಹಠಾತ್ತಾನೆ ಒಂದು ಅಲೆ ಬಂದು ನನ್ನ ಕೈಯಲ್ಲಿದ್ದ ಕೂದಲನ್ನು ಸೆಳೆದುಕೊಂಡು ಹೋಗಿ ನೀರಿನಲ್ಲಿ ಒಂದಾಯಿತು. ತೀರ್ಥ ಪವಿತ್ರವಾಗಲು ಅದು ನನ್ನ ಕೈಯಿಂದ ಆ ಕೂದಲನ್ನು ಸೆಳೆದುಕೊಂಡು ಹೋಯಿತು.''

ಶ್ರೀರಾಮಕೃಷ್ಣರಂಥ ಮಹಾಪುರುಷರ ದಿವ್ಯತೆಗೆ ಸೀಮೆಯುಂಟೆ? ನಾವು ಜಡವೆಂದು ಭಾವಿಸುವ ಅವರ ದೇಹದ ಒಂದು ಕೂದಲೂ ಅವರ ದಿವ್ಯಸ್ಪರ್ಶದಿಂದ ಪವಿತ್ರವಾಗುವುದು. ಭಗವತ್ ಸಾಕ್ಷಾತ್ಕಾರ ಹೊಂದಿದವನ ರೋಮರೋಮವೂ ಅದರ ಅಸಾಧಾರಣ ಕಂಪನದಿಂದ ಚೈತನ್ಯಮಯವಾಗಿಬಿಡುವುದು. ಆದ್ದರಿಂದಲೇ ಅವರ ಅಸ್ಥಿ, ಅವರು ಉಪಯೋಗಿಸಿದ ವಸ್ತುಗಳು, ಅವರ ಸ್ಪರ್ಶದಿಂದ ಪವಿತ್ರಗೊಂಡ ಪ್ರತಿಯೊಂದು ಸ್ಥಳವೂ ದಿವ್ಯವೆನಿಸುವುದು. ಇದು ಕೇವಲ ಭಾವುಕತೆಯ, ಉತ್ಪ್ರೇಕ್ಷೆಯ ಅಥವಾ ಗೌರವಪೂರ್ಣವಾದ (ಅಂದರೆ ವಾಸ್ತವಿಕಲ್ಲದ) ಒಂದು ಭಾವನೆ ಎಂದು ನಾವು ಭಾವಿಸಬಾರದು. ಮೇಲಿನ ಘಟನೆ ಅಂಥ ಸಂದೇಹಗಳನ್ನು ಅಲ್ಲಗಳೆಯುತ್ತದೆ; ಪ್ರತಿಯೊಂದು ಭಾವನೆಯೂ ವಾಸ್ತವವೇ ಎಂಬುದನ್ನು ತೋರಿಸಿಕೊಡುತ್ತದೆ. 'ನೀರು ಜೀವವಿಲ್ಲದ ಜಡವಸ್ತು; ನದಿಯು ನೀರು ಹೀಗೆಲ್ಲ ಭಾವಿಸುವುದೆ?' ಎಂದೆಲ್ಲ ವೈಜ್ಞಾನಿಕವಾಗಿ ಪ್ರಶ್ನಿಸ ಬಹುದು; ಆದರೆ ಆಧ್ಯಾತ್ಮಿಕ ನೆಲೆಯಲ್ಲಿ ಸತ್ಯವನ್ನು ಅರ್ಥಮಾಡಿಕೊಳ್ಳುವ ರೀತಿಯೇ ಬೇರೆ. ಅದಕ್ಕೆ ಭೌತಿಕ ದೃಷ್ಟಿಯ ಮಾನದಂಡವನ್ನು ಉಪಯೋಗಿಸಬಾರದು. ಶ್ರೀಮಾತೆಯಂತಹ, ಶ್ರೀರಾಮಕೃಷ್ಣರಂತಹ ದಿವ್ಯವ್ಯಕ್ತಿಗಳ